

# ಕರಾವಳಿ ಜಾನಪದ

ಡಾ. ಪುರುಷೋತ್ತಮ ಬಿಳಿಮಲೆ

# ಕರಾವಳಿ ಜಾನಪದ

ಡಾ. ಪುರುಷೋತ್ತಮ ಬಿಳಿಮಲೆ
ಮಂಗಳೂರು ವಿಶ್ವವಿದ್ಯಾನಿಲಯ

1990
ಮಂಗಳಗಂಗೋತ್ರಿ, ದಕ್ಷಿಣ ಕನ್ನಡ ಜಿಲ್ಲೆ

# ಪರಿವಿಡಿ

## ಪ್ರಸ್ತಾವನೆ


1. ಕರಾವಳಿ ಜನಪದ ಕಾವ್ಯದ ತಾತ್ತ್ವಿಕ ಹಿನ್ನೆಲೆ 1

2. ಸಿದ್ಧವೇಶ: ಪ್ರತಿಭಟನೆ ಮತ್ತು ನಿರಸನ 19

3. ಕಂಬುಲ: ಆಟವೋ ಆಚರಣೆಯೋ? 31

4. ಜನಪದ ಕತೆಯ ಪಾಠಾಂತರಗಳು ಸಂದರ್ಭ ಮತ್ತು ಅರ್ಥ 52

5. ಐತಿಹ್ಯ: ಸ್ವರೂಪ, ಲಕ್ಷಣ ಪ್ರಕಾರಗಳು 73

6. ಉರುಗಳು: ಭಯಾನಕ ಮಾನವ ಪರ್ಯಾಯಗಳು 86

7. ಗೌಡರ ಮದುವೆ: ಹಸಿವು ಕಾಮಗಳ ಸಮನ್ವಯ 99

8. ಜೋಗಿಗಳು: ಜಾಗೃತಗೊಳ್ಳದ ಜನಾಂಗ 114

9. ಮ್ಯಾಲರು: ನಿಗೂಢಲೋಕದ ವಿಸ್ಮಯಗಳು 135

10. ಜಾನಪದದಲ್ಲಿ ಲೋಕದೃಷ್ಟಿ 152

# ಪ್ರಸ್ತಾವನೆ

## 1

ಭಾರತವನ್ನು ಗಮನದಲ್ಲಿ ಇಟ್ಟುಕೊಂಡರೆ ಕರ್ನಾಟಕದಲ್ಲಿ ನಡೆಯುತ್ತಿರುವ ಜಾನಪದ ಅಧ್ಯಯನವು ಸಾಕಷ್ಟು ವಿಸ್ತಾರವೂ, ಗಂಭೀರವೂ ಆಗಿರುವುದು ಕಂಡುಬರುತ್ತದೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಫಿನ್ಲೆಂಡ್, ಅಮೇರಿಕಾಗಳಲ್ಲಿ ನಡೆಯುತ್ತಿರುವ ಕೆಲಸಗಳನ್ನು ಗಮನಿಸಿದರೆ ನಾವು ಶತಮಾನದಷ್ಟು ಹಿಂದೆ ಇರುವುದು ಸ್ಪಷ್ಟ. ಕರ್ನಾಟಕ ಜಾನಪದ ಅಧ್ಯಯನವು ಬಹುಮಟ್ಟಿಗೆ ಸಂಗ್ರಹ ಕಾರ್ಯಕ್ಕೇ ಮಹತ್ತ್ವ ನೀಡುವ ಪರಂಪರೆಯೊಂದನ್ನು ಬೆಳೆಸಿಕೊಂಡು ಬಂದಿದೆ. 'ಆಧುನಿಕತೆಯ ಗಾಳಿ ಎಲ್ಲವನ್ನು ಪರಿವರ್ತಿಸುವ ಮುನ್ನ ಸಂಗ್ರಹಕಾರ್ಯ ಮುಗಿದು ಬಿಡಬೇಕೆಂಬ' ಜನಪ್ರಿಯವಾದ ಹೇಳಿಕೆ ಇಲ್ಲಿ ಆಗಾಗ ಕೇಳಿಬರುತ್ತಿದೆ. 'ಎಲ್ಲರೂ ಮನಸುಮಾಡಿದರೆ ಈ ಸಂಗ್ರಹಕಾರ್ಯವನ್ನು ಬೇಗನೆ ಮುಗಿಸಿಬಿಡ ಬಹುದೆಂಬ' ಭಾವವೇ ಇಲ್ಲಿ ಹೆಚ್ಚು. ಹಾಗಾಗಿ ಇಲ್ಲಿ ಹೆಚ್ಚು ಹೆಚ್ಚು ಸಂಗ್ರಹಗಳನ್ನು ರಾಶಿ ಹಾಕಲಾಗುತ್ತಿದೆ. ಮತ್ತು ಅದನ್ನು ಪ್ರಕಟಿಸಲಾಗುತ್ತಿದೆ.

ಒಂದು ನಿರ್ದಿಷ್ಟ ಹಂತದ ವರೆಗೆ ಇದು ಸರಿ. ಆದರೆ ಇದುವೇ ಅಂತಿಮವಲ್ಲ. ಎಷ್ಟೋ ಬಾರಿ ಸಂಗ್ರಹಕಾರ್ಯವೇ ಅವೈಜ್ಞಾನಿಕವಾದುದರಿಂದ, ಸಂಗ್ರಹಗಳು ಯಾವುದೇ ಪ್ರಯೋಜನಕ್ಕೆ ಬಾರದೆ ಹೋಗುತ್ತಿವೆ. ಏಕೆಂದರೆ ಜಾನಪದ ಸಂಗ್ರಹಕಾರ್ಯದ ವಿಧಾನಗಳೂ ಈಚೆಗೆ ತೀವ್ರಗತಿಯಲ್ಲಿ ಬದಲಾವಣೆ ಕಂಡಿವೆ. ಹೊಸಹೊಸ ಸಿದ್ಧಾಂತಗಳು, ಹೊಸಬಗೆಯ ಕ್ಷೇತ್ರಕಾರ್ಯ ಮಾದರಿಗಳನ್ನು ರೂಪಿಸಿವೆ. ಇವುಗಳನ್ನು ಅಳವಡಿಸಿಕೊಳ್ಳದ ಸಂಗ್ರಹಗಳು ಹೊಸ ಬಗೆಯ ಅಧ್ಯಯನಕ್ಕೆ ಮಾಹಿತಿಗಳನ್ನು ನೀಡಲು ವಿಫಲವಾಗಿ, ವ್ಯರ್ಥವಾಗುತ್ತಿವೆ. ಇದನ್ನು ಸೂಕ್ಷ್ಮವಾಗಿ ಅರಿತುಕೊಂಡು ನಾವೀಗ ನಮ್ಮ ಜಾನಪದ ಸಂಗ್ರಹದ ರೀತಿಯನ್ನು, ಅಧ್ಯಯನ ವಿಧಾನವನ್ನು ಮೂಲಭೂತವಾಗಿ ಬದಲಾಯಿಸಿಕೊಳ್ಳಬೇಕಾಗಿದೆ. ಜಾನಪದ ಕ್ಷೇತ್ರದಲ್ಲಿ ನಾವು ನಮ್ಮನ್ನು ಹೆಚ್ಚು ಸಮಕಾಲೀನಗೊಳಿಸಿಕೊಳ್ಳಬೇಕಾಗಿದೆ.

ಈ ಸಮಕಾಲೀನಗೊಳಿಸಿಕೊಳ್ಳುವಿಕೆಯ ಕೆಲಸ ಸುಲಭವಾದದ್ದೇನೂ ಅಲ್ಲ. ಅದು ಗಾಢವಾದ ಶ್ರದ್ಧೆ ಮತ್ತು ಅಧ್ಯಯನವನ್ನು ಬಯಸುತ್ತದೆ. ಆದರೆ ನಮಗೆ ಬಹಳ ಜನರಿಗೆ ಜಾನಪದ ಅಧ್ಯಯನವು ಅಂಶ ಕಾಲಿಕ ಕೆಲಸ. ಏಕೆಂದರೆ ಇಂದು ಜಾನಪದದಲ್ಲಿ ದುಡಿಯುತ್ತಿರುವ ಬಹಳ ಜನರು ಸಾಹಿತ್ಯದ ವಿದ್ಯಾರ್ಥಿಗಳು. ಸಾಹಿತ್ಯದ ಒಂದು ಅಂಗವಾಗಿಯೇ ನಾವು ಜಾನಪದವನ್ನು ಬೋಧಿಸುತ್ತಿದ್ದೇವೆ ಕೂಡಾ. ಇದರಿಂದಾಗಿ ಸಾಹಿತ್ಯಕ್ಕೆ ಸಂಬಂಧಿಸಿದ ಹಾಗೆ ಗ್ರಂಥಾಲಯಗಳು ಬೆಳೆದ ರೀತಿಯಲ್ಲಿ ಜಾನಪದ ಗ್ರಂಥ ಭಂಡಾರಗಳು ಬೆಳೆಯಲಿಲ್ಲ, ಬೆಳೆಯುತ್ತಿಲ್ಲ. ಅಖಿಲಭಾರತ ಮಟ್ಟದಲ್ಲಿ ಶಿಕ್ಷಣ ತಜ್ಞರ ಆಸಕ್ತಿ ಇನ್ನೂ ಜಾನಪದದ ಕಡೆಗೆ ಅಷ್ಟಾಗಿ ಹೊರಳಿಲ್ಲ. ಜಾನಪದ ಅಧ್ಯಯನಾಕಾಂಕ್ಷಿಗಳನ್ನು ಮತ್ತೆ ಮತ್ತೆ ನವೀಕರಣ ಗೊಳಿಸಿಕೊಳ್ಳಲು ಬೇಕಾದ ಕಮ್ಮಟಗಳೂ ನಡೆಯುತ್ತಿಲ್ಲ.

ಇಂಥ ಸಂದರ್ಭದಲ್ಲಿ ನಾವು ಜಾನಪದವನ್ನು ಹೊಸದಾಗಿ ನಿರ್ವಚಿಸಿಕೊಳ್ಳುವುದರ ಮೂಲಕ ನಮ್ಮ ಅಧ್ಯಯನ ವಿಧಾನವನ್ನು ಪರಿಷ್ಕರಿಸಿಕೊಳ್ಳಬೇಕಾಗಿದೆ. ಜಾನಪದವು ಪರಿವರ್ತನಶೀಲ ಸಮಾಜದಲ್ಲಿಯೂ ಕಾಣಿಸಿಕೊಳ್ಳುತ್ತ ನಿರಂತರವಾಗಿರುತ್ತದೆ ಎಂಬ ನವೀನ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದೆಂದೂ ಸ್ಥಗಿತ ಸಂಸ್ಕೃತಿಯ ಮಾದರಿಯಲ್ಲ. ಅಥವಾ ಪ್ರಾಚೀನಕಾಲದ ವೈಭವವನ್ನು ಕಂಡು ಹುಡುಕಲು ಎಡೆಮಾಡಿಕೊಡುವ ಮಾಧ್ಯಮವೂ ಅಲ್ಲ. ಚಲನಶೀಲ ಸಮಾಜದ ಸತ್ವವನ್ನು ತನ್ನದೇ ಆದ ಅನನ್ಯವಾದ ರೀತಿಯಲ್ಲಿ ಪ್ರಕಟಪಡಿಸುವ ಜಾನಪದದ ಒಟ್ಟಾರೆ ವ್ಯಾಪ್ತಿಯಲ್ಲಿ 'ಶುದ್ಧ-ಅಶುದ್ಧ'ಗಳೆಂಬ ಮೌಲ್ಯ ಮಾಪಕ ದೃಷ್ಟಿಕೋನವೂ ಅರ್ಥಹೀನವಾದುದು. ಚಲನಶೀಲ ಸಾಮಾಜಿಕ ಸಂದರ್ಭದಲ್ಲಿ ಮಾನವನ ಪ್ರವೃತ್ತಿ ಗಳನ್ನು ವಿಶ್ಲೇಷಿಸಲು ಅನುವು ಮಾಡಿಕೊಡುವ ಜಾನಪದ ಅಧ್ಯಯನವು ಸಂಸ್ಕೃತಿಯೊಂದರ ಸ್ವರೂಪದ ಬಗ್ಗೆ ನಮ್ಮ ಅರಿವನ್ನು ಗಮನಾರ್ಹವಾಗಿ ವಿಸ್ತರಿಸಬಲ್ಲುದು.

ನನ್ನ ಅಧ್ಯಯನದ ಮುಖ್ಯ ಆಸಕ್ತಿ ಈ ಬಗೆಯದು. ಇದನ್ನು ಒಂದು ರೀತಿಯ ಪೂರ್ವಾಗ್ರಹ ಎಂದೂ ಕರೆಯಬಹುದು. ಈ ಪೂರ್ವಾಗ್ರಹಕ್ಕೆ ಸಾಮಾಜಿಕ-ಶೈಕ್ಷಣಿಕ ರಾಜಕೀಯ ಆಸಕ್ತಿಗಳಿರುವುದರಿಂದ ಅದನ್ನು ಇನ್ನಷ್ಟು ಸ್ಪಷ್ಟಪಡಿಸಲಿಚ್ಛಿಸುತ್ತೇನೆ.

ಎರಡು ಆವರ್ತನಗಳಲ್ಲಿ ಸಂಸ್ಕೃತಿಯ ಮೂಲಶಿಷ್ಟ ನಿರ್ಮಾಣಹೊಂದುತ್ತದೆ. ಮೊದಲನೇ ಆವರ್ತನ ಮನುಷ್ಯನ ಹುಟ್ಟಿನಲ್ಲಿ ಆರಂಭವಾಗಿ ಸಾವಿನಲ್ಲಿ ಕೊನೆಗೊಳ್ಳುತ್ತದೆ. ಇದರ ಮಧ್ಯೆ ಅನೇಕ ಸ್ಥಿತ್ಯಂತರಗಳ ಹಂತಗಳಿವೆ. ಬಾಲ್ಯದಿಂದ ಯೌವನಕ್ಕೆ, ಮದುವೆ ಪೂರ್ವದಿಂದ ಮದುವೆಯ ಅನಂತರಕ್ಕೆ, ಜೀವದಿಂದ ಸಾವಿಗೆ... ಹೀಗೆ ಇದು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ವ್ಯತ್ಯಾಸ ವಾಗುತ್ತಾ ಇರುತ್ತದೆ. ಹೆಂಗುಸರಲ್ಲಿ ಈ ಸ್ಥಿತ್ಯಂತರಗಳು ಹೆಚ್ಚು. ಬಾಲ್ಯ, ಮೈನೆರೆಯುವಿಕೆ, ಮದುವೆ, ಸೀಮಂತ, ಸಾವು - ಹೀಗೆ ಅದು ತನಗಗತ್ಯವಾದ ಹಾದಿಗಳನ್ನು ನಿರ್ಮಿಸಿಕೊಂಡಿದೆ. ಈ ಜೀವನಾವರ್ತನ ಗಳಲ್ಲಿ ಮಾನವನು ತಾನೇ ಬದಲಾಗುವ ಸ್ಥಿತಿಯನ್ನು ಕಾನೂನುಬದ್ಧಗೊಳಿಸಿಕೊಳ್ಳಲು ತನ್ನ ಸಹಮಾನವರ ಜೊತೆ ಸೇರಿಕೊಂಡು ಬಗೆ ಬಗೆಯ ಆಚರಣೆಗಳನ್ನು ರೂಢಿಸಿಕೊಂಡಿದ್ದಾನೆ. ಒಂದು ಜನಾಂಗದ ಮಾನಸಿಕ ಸ್ಥಿರತೆಯನ್ನು ಇವು ಕಾಪಾಡಿಕೊಂಡು ಬರುತ್ತವೆ.

ಎರಡನೇ ಆವರ್ತನವು ವರುಷದಿಂದ ವರುಷಕ್ಕೆ ಸಾಗುವ ವಾರ್ಷಿಕಾವರ್ತನಕ್ಕೆ ಸಂಬಂಧಿಸಿದೆ. ಇಲ್ಲಿಯ ಕಾಲದ ಪರಿವರ್ತನೆಯು ಬಹುಮಟ್ಟಿಗೆ ಮಳೆ ಮತ್ತು ಬೆಳೆಯನ್ನು ಆಧರಿಸಿಕೊಂಡಿದೆ. ತುಳುನಾಡನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ ಪಗ್ಗುವಿನಿಂದ ಸುಗ್ಗಿಯವರೆಗಣ ವರುಷದ ಪರಿಕಲ್ಪನೆಯು ಭತ್ತದ ಕೃಷಿಕೆಲಸವನ್ನು ಆಧರಿಸಿಕೊಂಡಿದೆ. ಭಾರತೀಯ ಕಾಲಮಾನ ಗಣನೆಯು ಕೃಷಿಯನ್ನೇ ಆಧರಿಸಿಕೊಂಡು, ಸೂರ್ಯ-ಚಂದ್ರರ ಚಲನೆಯ ಮೂಲಕ ಅಸ್ತಿತ್ವಕ್ಕೆ ಬಂದಿದೆ (ಈಗಣ ಜನವರಿಯಿಂದ ದಶಂಬರದ ವರೆಗಣ ವಾರ್ಷಿಕ ಗಣನೆಯು ಇಲ್ಲಿಯ ಜೀವನಕ್ರಮದಿಂದ ರೂಪುಗೊಂಡ ಕಾಲಗಣನೆ ಯಲ್ಲ. ಅದು ಹೊರಗಿನಿಂದ ಹೇರಲ್ಪಟ್ಟದ್ದಾದ್ದರಿಂದ ಈ ಕಾಲಗಣನಾ ಪದ್ಧತಿಗೂ ನಮ್ಮ ಜನಪದರ ಜೀವನ ಪದ್ಧತಿಗೂ ಯಾವುದೇ ಜೈವಿಕ ಸಂಬಂಧ ಇನ್ನೂ ಏರ್ಪಟ್ಟಿಲ್ಲ) ಉತ್ಪಾದನಾ ವಿಧಾನ ಮತ್ತು ಉತ್ಪಾದನಾ ವಸ್ತುಗಳನ್ನು ಅವಲಂಬಿಸಿಕೊಂಡು ಇದು ಬೆಳೆದಿದೆ. ಮಾರ್ಕ್ಸನು ಇದನ್ನು 'ಮೂಲ ಆರ್ಥಿಕತೆ' ಎಂದು ಸರಿ ಯಾಗಿಯೇ ಗುರುತಿಸಿದ್ದಾನೆ.

ಸಂಸ್ಕೃತಿಯ ರೂಪೀಕರಣದಲ್ಲಿ ಇವೆರಡೂ ಆವರ್ತನಗಳು ಪರಸ್ಪರ ಪ್ರಭಾವಕ್ಕೆ ಒಳಗಾಗುತ್ತವೆ. ಹಾಗೆ ನೋಡಿದರೆ ಎಲ್ಲಿ ಜೀವನಾವರ್ತನ ಮತ್ತು ವಾರ್ಷಿಕಾವರ್ತನಗಳು ಸಂಧಿಸುತ್ತವೆಯೋ ಅಲ್ಲಿ ಸಂಸ್ಕೃತಿಯ ಮೂಲ ಮೌಲ್ಯವೊಂದು ಸಿದ್ಧವಾಗುತ್ತದೆ. ವೈವಿಧ್ಯಮಯ ಸಂಸ್ಕೃತಿಯ ನಿರ್ಮಾತೃವಾದ ಮಾನವನು, ಮೇಲೆ ಹೇಳಿದ ಎರಡೂ ಆವರ್ತನಗಳಿಗೆ ನಿರಂತರವಾಗಿ ಪ್ರತಿಕ್ರಿಯಿಸುತ್ತಲೇ ಬಂದಿದ್ದಾನೆ. ಉದಾಹರಣೆಗೆ ತುಳುನಾಡನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ ಇಲ್ಲಿಯ ವಾರ್ಷಿಕಾವರ್ತನದಲ್ಲಿ ಸುಗ್ಗಿ ತಿಂಗಳು ತುಂಬ ಮಹತ್ತ್ವದ ತಿಂಗಳು. ಏಕೆಂದರೆ ಆಗ ಹಸಿವನ್ನು ತೀರಿಸುವ ಭತ್ತವು ಗದ್ದೆಯಲ್ಲಿ ಬೆಳೆದಿರುತ್ತದೆ, ಇಲ್ಲವೇ ಮನೆಯ ಕಣಜವನ್ನು ತುಂಬಿರುತ್ತದೆ. ಸ್ಥೂಲವಾಗಿ ಇದನ್ನು ಸಮೃದ್ಧಿಯಕಾಲ ಎಂದೂ ಕರೆಯಬಹುದು. ಈ 'ಸಮೃದ್ಧಿ'ಯೇ ಜೀವನಾವರ್ತನವನ್ನು ಪ್ರಭಾವಿಸಿ, ಅಲ್ಲಿ ಅಷ್ಟೇ ಸಮೃದ್ಧಿಯ ನಲಿಕೆಗಳನ್ನು ಉಂಟುಮಾಡುತ್ತದೆ. ಭೂತಕುಣಿತ, ಸಿದ್ಧವೇಶ ಕುಣಿತವೇ ಮೊದಲಾದ ಬಗೆಬಗೆಯ ಕುಣಿತಗಳು ಆರಂಭವಾಗುತ್ತವೆ. ಮದುವೆಗಳು ನಡೆಯುವುದಕ್ಕೂ ಸುಗ್ಗಿ ತಿಂಗಳೇ ಪ್ರಶಸ್ತ ಎಂಬ ಭಾವ ಬಲಿಯುತ್ತದೆ. ಈ ತಿಂಗಳಿನಲ್ಲಿ ಮಕ್ಕಳು ಹುಟ್ಟಿದರೆ ಒಳ್ಳೆಯದು, ಹೆಣ್ಣು ಮೈನೆರೆದರೆ ಆಕೆಗೆ ಒಳ್ಳೆ ಗಂಡ ಸಿಗುತ್ತದೆ. ಹೀಗೆ ನಂಬಿಕೆಯ ಸಂಕೀರ್ಣವೇ ಸಿದ್ಧವಾಗುತ್ತದೆ. ಸುಗ್ಗಿಯು ಕೇವಲ ಗದ್ದೆಗಲ್ಲ, ಮಾನವನ ಬಾಳಿನ ಸುಗ್ಗಿಯೂ ಹೌದು. ಉತ್ಪಾದನಾ ಹೆಚ್ಚಳವನ್ನು ಅನುಸರಿಸಿಕೊಂಡು ಇಡೀ ಸಮಾಜವೇ 'ಸಮೃದ್ಧಿ'ಯ ಭಾವನಾಲೋಕವನ್ನು ಪ್ರವೇಶಿಸುತ್ತದೆ.

ಈ ವಾದ ಇನ್ನಷ್ಟು ಸ್ಪಷ್ಟವಾಗಬೇಕಾದರೆ ಸುಗ್ಗಿಗೆ ವಿರೋಧವಾದ ಬರಡುಕಾಲವನ್ನು ಗಮನಿಸಬೇಕು. ತುಳುನಾಡಿನಲ್ಲಿ ಆಟಿ ತಿಂಗಳೇ ಆ ದಾರಿದ್ರ್ಯ ಕಾಲ. ಆಗ ಗದ್ದೆಯಲ್ಲಿ ಭತ್ತ ಬೆಳೆದಿರುವುದಿಲ್ಲ. ಸುಗ್ಗಿಯ ಬೆಳೆ ಒದಗಿಸಿದ ಭತ್ತವೂ ಮುಗಿಯುವ ಕಾಲವದು. ಹವಾಮಾನದಲ್ಲೂ ಪರಿವರ್ತನೆಯು ಕಾಣಿಸಿಕೊಳ್ಳುತ್ತದೆ. ಜನರು ಹಸಿವಿನಿಂದ ಬಳಲುವ ಈ ಕಾಲದಲ್ಲಿ ಸಂತೋಷಕರ ಕಾರ್ಯಕ್ರಮಗಳು ಒಂದೂ ನಡೆಯುವುದಿಲ್ಲ. ಈ ತಿಂಗಳಿನಲ್ಲಿ ಮದುವೆ ನಿಷಿದ್ಧ, ಹೆಣ್ಣು ಮೈನೆರೆದರೆ ಅನಿಷ್ಟ. ಗಂಡನು ಹೆಂಡತಿಯ ಮುಖ ನೋಡ ಬಾರದು. ಈ ತಿಂಗಳಿನಲ್ಲಿ ಮನೆಮನೆಗೆ ಬರುವ ಆಟಿಕಳೆಂಜನು ನಾಡಿನ ದುರಿತಗಳನ್ನು ದೂರತಳ್ಳುವ ಮಾಂತ್ರಿಕನೆಂಬುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಸ್ವತಃ ಕಳೆಂಜನೇ ಈ ತಿಂಗಳಿನಲ್ಲಿ

ಹಸಿವಿನಿಂದ ಕಂಗಾಲಾದ ಚಿತ್ರವು ಆಟಿಕಳೆಂಜನ ಪಾಡ್ದನದಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ. ಹೀಗೆ ಯಾವ ಕೋನದಿಂದ ನೋಡಿದರೂ ಜನಪದರ 'ಆಟಿ'ಯ ಪರಿಕಲ್ಪನೆಯು 'ಸುಗ್ಗಿ'ಯ ಪರಿಕಲ್ಪನೆಗೆ ವಿರೋಧ ವಾಗಿರುವುದು ತಾನೇತಾನಾಗಿ ಪ್ರಕಟವಾಗಿದೆ.

ಮೇಲಿನ ಉದಾಹರಣೆಯಿಂದ ಸಂಸ್ಕೃತಿಯ ಪರಿಕಲ್ಪನೆಗಳು ರೂಪುಗೊಳ್ಳುವ ಪ್ರಕ್ರಿಯೆಯ ಕೆಲವು ಮುಖಗಳು ಸ್ಪಷ್ಟವಾಗುತ್ತದೆ. ಕಾಲ, ದೇಶ, ಜನಾಂಗವನ್ನು ಅನುಸರಿಸಿಕೊಂಡು ಅವು ವೈವಿಧ್ಯವನ್ನೋ ಏಕತಾನತೆಯನ್ನೋ ಪ್ರಕಟಿಸುತ್ತವೆ.

ಭಾರತದಂಥ ಜಾತಿನಿಷ್ಠ ದೇಶದಲ್ಲಿ ಈ ಬಗೆಯ ಸಂಸ್ಕೃತಿಗಳು ಬಗೆ ಬಗೆಯಾಗಿರುವುದರ ಜೊತೆಗೆ ಚಾರಿತ್ರಿಕವಾಗಿ ಶ್ರೇಣೀಕರಣಕ್ಕೂ ಒಳಗಾದವು. ಈ ಶ್ರೇಣೀಕರಣದ ಮೇಲ್ತುದಿಯಲ್ಲಿ ಬ್ರಾಹ್ಮಣರಿದ್ದರೆ ಅದರ ಕೆಳತುದಿಯಲ್ಲಿ ದಲಿತರಿದ್ದಾರೆ. ಪರಂಪರೆಯು ಹಲವು ಕಾರಣಗಳಿಂದಾಗಿ ಬೆಳೆದು ಬಂದ ಬಗೆಯಲ್ಲಿಯೇ ನಿಂತು ನೋಡಿದಾಗ, ಮೇಲ್ತುದಿಯ ಬ್ರಾಹ್ಮಣರು ಸಂಪೂರ್ಣವಾಗಿ 'ಮಡಿ'ಯೆಂದೂ, ಕೆಳತುದಿಯ ದಲಿತರು ಸಂಪೂರ್ಣ 'ಮೈಲಿಗೆ' ಎಂದೂ ಗುರುತಿಸಲ್ಪಟ್ಟರು. ಹಾಗಾಗಿಯೇ ಕೆಲವು ಸಮಾಜ ವಿಜ್ಞಾನಿಗಳು ಭಾರತೀಯ ಸಮಾಜವು 'ಮಡಿ-ಮೈಲಿಗೆ'ಯ ವಿರೋಧ ದ್ವಂದ್ವವನ್ನು ನಿರಂತರವಾಗಿ ಕಾಪಾಡಿ ಕೊಂಡು ಬರಲು ಹವಣಿಸುತ್ತದೆ ಎಂದು ಈ ಸಮಾಜವನ್ನು ವಿಶ್ಲೇಷಿಸಿದರು. ಅದೇನೇ ಇರಲಿ, ವರ್ಗ ಸಮಾಜದಲ್ಲಿ, ಮತ್ತು ಜಾತಿಸಮಾಜದಲ್ಲಿ ಆಳುವ ವರ್ಗವು ಸಮಾಜವನ್ನು ತನ್ನ ಹಿಡಿತದಲ್ಲಿ ಇರಿಸಿ ಕೊಳ್ಳುತ್ತಿರುತ್ತದೆ ಎಂಬ ಮಾತಂತೂ ನಿಜ. ಈ ಕಾರಣದಿಂದಾಗಿ ಭಾರತದಲ್ಲಿ ಆಳುವವರ್ಗವಾದ ಮೇಲ್ಜಾತಿಗಳು, ತಮ್ಮ ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ಆಚರಣೆಗಳನ್ನೂ, ಆ ಮೂಲಕ ತಮ್ಮ ಸಂಸ್ಕೃತಿಯ ಮೌಲ್ಯಗಳನ್ನು ಶ್ರೇಷ್ಠವೆಂದು ಸ್ಥಾಪಿಸಿದರು. ಈ ಜನವರ್ಗಕ್ಕೆ 'ಅಕ್ಷರ' ದೊರೆತದ್ದರಿಂದ ಅವುಗಳು ಬರೆಹದ ಮೂಲಕ ದಾಖಲಾದವು. ಈ ಬರೆಹಗಳೇ ನಮ್ಮ ಕಲೋನಿಯಲ್ ಚರಿತ್ರಕಾರರ ಆಕರ ಸಾಮಗ್ರಿ ಗಳಾದುವು. ಹೀಗಾಗಿ ನಾವು ಇಂದು ಯಾವುದನ್ನು ಚರಿತ್ರೆ ಎನ್ನುತ್ತೇವೆಯೋ, ಯಾವುದನ್ನು ಭಾರತೀಯ ಸಂಸ್ಕೃತಿ ಎನ್ನುತ್ತೇವೆಯೋ, ಅವು ಕೇವಲ ಅಲ್ಪಸಂಖ್ಯಾಕ ವರ್ಗದ ಚಿಂತನೆಗಳಾಗಿ ಬಿಟ್ಟವು. ಬಹುಸಂಖ್ಯಾಕ ಜನವರ್ಗದ ಸಾಂಸ್ಕೃತಿಕ ಮೌಲ್ಯಗಳು ಈ ದೇಶದ ಚರಿತ್ರೆಯಲ್ಲಾಗಲೀ, ಸಂಸ್ಕೃತಿಯ ಭಾಷ್ಯದಲ್ಲಾಗಲೀ ದಾಖಲಾಗದೇ ಹೋಯಿತು. ಇದರಿಂದಾಗಿ ನಮ್ಮ ಚಿಂತನೆಗಳು ಪಾರ್ಶ್ವಿಕವೂ, ಬಡಕಲೂ ಆಗಿ ಸೊರಗಿದವು. ಬಹುಸಂಖ್ಯಾಕರ ಸಂಸ್ಕೃತಿ ಮತ್ತು ಜ್ಞಾನವು ನಿರ್ಲಕ್ಷ್ಯಕ್ಕೆ ಒಳಗಾಗಿ ಮುದುಡಿದವು.

ಹೀಗೆ ಮೌನವಾಗಿ ಉಳಿದು ಬಿಟ್ಟ ಬಹುಸಂಖ್ಯಾಕ ಜನವರ್ಗದ ಜ್ಞಾನವನ್ನು ಈಗ ಸಂಗ್ರಹಿಸಿ, ವಿಶ್ಲೇಷಿಸಬೇಕಾಗಿದೆ. ಈ ಜ್ಞಾನದ ಸಂಗ್ರಹಣೆಗೆ ನಾವು ಮೌಖಿಕ ಮಾಧ್ಯಮಕ್ಕೆ ಮೊರೆಹೋಗಬೇಕು. ಅಕ್ಷರದಲ್ಲಿ ದಾಖಲಾಗದೆ, ಕೇವಲ ಬಾಯಿಮಾತಿನಲ್ಲಿ ಉಳಿದಿರಬಹುದಾದ ಜನರ ಅಗಾಧ ಜ್ಞಾನವನ್ನು ನಾವು ಆದಷ್ಟು ತೀವ್ರಗತಿಯಲ್ಲಿ ಸಂಗ್ರಹಿಸಿ, ಅದರ ಬಗ್ಗೆ ಚರ್ಚೆ ನಡೆಸಬೇಕಾಗಿದೆ.

ನನ್ನ ಜಾನಪದ ಆಸಕ್ತಿ ಬಹುಮಟ್ಟಿಗೆ ಈ ಬಗೆಯದು. ಅದು ಚಾರಿತ್ರಿಕವಾಗಿ ನಿರ್ಲಕ್ಷಿತರಾಗಿದ್ದ ಜನರ ಜ್ಞಾನದ ಅನ್ವೇಷಣೆಗೆ ಸೀಮಿತವಾಗಿದೆ. ಅಂದರೆ ನಾನು ಜಾನಪದದ ವ್ಯಾಖ್ಯೆಯನ್ನೇ ಸಂಕುಚಿತ ಗೊಳಿಸುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ಜಾನಪದವು ಎಲ್ಲ ಕಡೆಯೂ ಇರುವುದು ಹೌದಾದರೂ ನನ್ನ ಗಮನ 'ಕೆಳಜಾತಿ' ಎಂದು ಗುರುತಿಸಲ್ಪಟ್ಟವರ ಬಗೆಗೆ ಮಾತ್ರ ಇರುತ್ತದೆ. ಹೀಗೆ ಮಾಡು ವುದರಿಂದ ಇಂದು ನಾವು ಯಾವುದನ್ನು 'ಹಿಂದೂ ಸಂಸ್ಕೃತಿ' ಎಂದು ಘೋಷಿಸಿ ಅದನ್ನು ರಾಷ್ಟ್ರೀಯ ಧರ್ಮವೆಂದು ಅನಧಿಕೃತವಾಗಿ ಮಾನ್ಯ ಮಾಡುತ್ತಿದ್ದೇವೆಯೋ ಅದನ್ನು ಪ್ರಶ್ನಿಸಲು ಸಾಧ್ಯವಿದೆ. ಜಾನಪದದ ಮೂಲಕ ಅದಕ್ಕಿಂತ ಹೊರತಾಗಿರುವ ಸಂಸ್ಕೃತಿಯೊಂದರ ಶೋಧ ಸಾಧ್ಯ ಎಂದು ನಾನು ಭಾವಿಸುತ್ತೇನೆ. ಇಂಥ ಪರ್ಯಾಯ ಸಂಸ್ಕೃತಿಯ ಶೋಧ ಮತ್ತು ವಿಶ್ಲೇಷಣೆಯು, ಭಾರತದ ಬಗೆಗಣ ನಮ್ಮ ಅರಿವನ್ನು ಗಮನಾರ್ಹವಾಗಿ ವಿಸ್ತರಿಸುತ್ತದೆ ಮಾತ್ರವಲ್ಲ ಇಂದು ಬಲ ಪಂಥೀಯ ಜನರು ಮಾಡುತ್ತಿರುವ ಘೋಷಣೆಗಳ ಪೊಳ್ಳುತನವನ್ನು ಬಯಲಿಗೆಳೆಯುತ್ತದೆ. ಈ ನಿಟ್ಟಿನಿಂದ ನೋಡಿದಾಗ ಜಾನಪದ ಅಧ್ಯಯನದ ರಾಜಕೀಯ ಮುಖವೂ ಸ್ಪಷ್ಟವಾಗುತ್ತದೆ. ಅದು ನಮ್ಮ ಆಯ್ಕೆಗಳಿಗೆ ಒಂದು ನಿರ್ದಿಷ್ಟ ದಾರಿಯನ್ನು ತೋರಿಸುತ್ತದೆ. ಸಂಸ್ಕೃತಿಯ ಅಗಾಧವಾದ ಮತ್ತು ಬಲಿಷ್ಠವಾದ ಮುಖವೊಂದನ್ನು ಮರೆತು ನಾವು ಕೈ ಗೊಳ್ಳುವ ತೀರ್ಮಾನಗಳು, ಅಂತಿಮವಾಗಿ ಜನವಿರೋಧಿಯಾಗಿ ಬಿಡುತ್ತವೆ ಎಂಬುದನ್ನು ನಾನು ಮತ್ತೆ

ಹೇಳಬೇಕಾಗಿಲ್ಲ. ಇದರಿಂದಾಗಿಯೇ ನನಗೆ ವಾಲ್ಮೀಕಿ ಬರೆದ ರಾಮಾಯಣದ ಒಂದು ಪಠ್ಯಕ್ಕಿಂತ, ಜನರ ಬಾಯಲ್ಲಿ ಇರುವ ಸಾವಿರ ಸಾವಿರ ರಾಮಾಯಣಗಳ ಪಠ್ಯಗಳ ಅಧ್ಯಯನ ಸದ್ಯಕ್ಕೆ ಬಹಳ ಅಗತ್ಯವೆಂದು ತೋರುತ್ತದೆ, ಏಳು ರಾತ್ರಿ ಏಳು ಹಗಲು ನಿರಂತರವಾಗಿ ನಿರೂಪಿತವಾಗುವ ಪಾಡ್ದನಗಳು ಮುಖ್ಯವೆಂದು ತೋರುತ್ತದೆ, ಜನರ ಬಾಯಲ್ಲಿರುವ ಲಕ್ಷಾಂತರ ಜನಪದ ಕತೆಗಳು ಮಹತ್ತ್ವದ್ದಾಗಿ ತೋರುತ್ತದೆ. ಘೋಷಿತ ಮಹಾಕಾವ್ಯಗಳಿಗಿಂತ ಅಘೋಷಿತ ಮಹಾಕಾವ್ಯಗಳು ನನಗೆ ಇಷ್ಟ. ಇಂಥವುಗಳ ಮೌಲ್ಯಗಳು ನಮಗೆ ಎಷ್ಟು ಪ್ರಸ್ತುತವಾಗಿರುತ್ತವೆ ಎಂಬುದು ಈಗಾಗಲೇ ತೀರ್ಮಾನವಾಗತಕ್ಕಂಥ ವಿಚಾರ ಅಲ್ಲ. ಹೆಚ್ಚು ಹೆಚ್ಚು ಸಂಗ್ರಹ ಮತ್ತು ಅಧ್ಯಯನಗಳು ನಡೆದ ಮೇಲಷ್ಟೇ ಅವುಗಳ ಪ್ರಸ್ತುತತೆಯ ಬಗ್ಗೆ ಮಾತಾಡಲು ಸಾಧ್ಯ. ಜಾನಪದದ ಬಗೆಗಣ ಮುಂದಿನ ಅಧ್ಯಯನಗಳು ಚಾರಿತ್ರಿಕವಾಗಿ ನಿರ್ಲಕ್ಷಿಸಲ್ಪಟ್ಟ ಜನರ ಜ್ಞಾನದ ಸಂಗ್ರಹ ಮತ್ತು ವಿಶ್ಲೇಷಣೆಯೊಂದಿಗೆ ಸಂಬಂಧಹೊಂದಿರಬೇಕೆಂದು ನಾನು ಭಾವಿಸುತ್ತೇನೆ.

ಈ ಸಂಪುಟದ 10 ಲೇಖನಗಳು ಅಂಥ ಉದ್ದೇಶದಲ್ಲಿಯೇ ರಚಿತವಾದುವು. ಅದರಲ್ಲಿ ಕಾವ್ಯ, ಕುಣಿತ, ಆಚರಣೆ, ಐತಿಹ್ಯ, ನಂಬಿಕೆಗಳು, ಕತೆ, ಜನಾಂಗ — ಇವೆಲ್ಲವುಗಳ ಒಂದೊಂದು ಮಾದರಿಗಳಿವೆ. ಕೊನೆಯ ಲೇಖನವಾದ 'ಜನಪದರ ಲೋಕದೃಷ್ಟಿ'ಯಲ್ಲಿ ಈ ಚಿಂತನೆಗಳು ಹೇಗೆ ಭಿನ್ನವಾಗಿರುತ್ತವೆ ಎಂದು ಹೇಳಲು ಪ್ರಯತ್ನಿಸಲಾಗಿದೆ.

ಇಂಥ ಕಡೆ ಜಾನಪದ ಸಂಶೋಧಕನ ಮುಂದೆ ಇನ್ನೊಂದು ಸಮಸ್ಯೆ ಎದುರಾಗುತ್ತದೆ. ಅದು ಜನರ ಭಾವುಕತನ ಮತ್ತು ವೈಚಾರಿಕತೆಗೆ ಸಂಬಂಧಿಸಿದೆ. ಒಬ್ಬ ಸಂಶೋಧಕನಿಗೆ ತನ್ನ ಕ್ಷೇತ್ರಕಾರ್ಯದಲ್ಲಿ ಕಂಡ ಅತ್ಯಂತ ಮಹತ್ತ್ವದ ಸಂಗತಿಗಳು, ಎಲ್ಲರಿಗೂ ಮಹತ್ತ್ವದ್ದಾಗಿಯೇ ಕಾಣಬೇಕೆಂದೇನೂ ಇಲ್ಲ. ಒಂದು ಜನಾಂಗಕ್ಕೆ ಸಂಬಂಧಿಸಿದಂತೆ ಈ ಮಾತು ಇನ್ನೂ ನಿಷ್ಠುರವಾಗುತ್ತದೆ. ಉದಾಹರಣೆಗೆ ಮ್ಯಾಲರ ಆಚರಣೆಗಳಲ್ಲಿ ನಾನು ಯಾವುದನ್ನು ಬಹಳ ಮುಖ್ಯ ಎಂದು ಗುರುತಿಸುತ್ತೇನೆಯೋ, ಅದು ಸ್ವತಃ ಮ್ಯಾಲರ ಅಭಿಪ್ರಾಯದಲ್ಲಿ ಬಹಳ ಕನಿಷ್ಠದ್ದಾಗಿರುತ್ತದೆ. ಇಲ್ಲಿ ಯಾರ ಅಭಿಪ್ರಾಯವನ್ನು ಮಾನ್ಯಮಾಡಬೇಕು ಎಂಬುದಕ್ಕಿಂತ, ಸಂಶೋಧಕ ಮತ್ತು ಸಂಶೋಧಿತನ ಅಭಿಪ್ರಾಯಗಳು ಮುಖಾಮುಖಿಯಾಗುತ್ತವೆ ಎಂಬುದು ಮುಖ್ಯ. ಬಹಳ ತೀವ್ರಗತಿಯಲ್ಲಿ ಸಂಸ್ಕೃತೀಕರಣಕ್ಕೊಳಗಾಗುತ್ತಿರುವ ಭಾರತದ ವಿವಿಧ ಜಾತಿಗಳ ಮಧ್ಯೆ ಈ ಸಮಸ್ಯೆ ಘೋರತರವೂ, ಸಂಶೋಧನೆಗೆ ಮಾರಕವೂ ಆಗಿಬಿಡುತ್ತಿರುವ ಸೂಚನೆಗಳಿವೆ. ಸಂಶೋಧಕನು ತಾನು ಕಂಡದ್ದನ್ನು ಹೇಳಿದರೆ, ಅದಕ್ಕೊಂದು ವ್ಯಾಖ್ಯಾನ ನೀಡಿದರೆ, ಜನರ ಭಾವನೆಗಳಿಗೆ ನೋವಾಗುತ್ತದೆ. ಹೇಳದೇ ಇದ್ದರೆ ಅದು ಅಪ್ರಾಮಾಣಿಕವಾಗುತ್ತದೆ. ಸಂಶೋಧನೆಗೆ ವಂಚನೆ ಮಾಡಿದಂತಾಗುತ್ತದೆ. ಜಾನಪದ ಸಂಶೋಧಕರು ಈ ಸಮಸ್ಯೆಯನ್ನು ಹೇಗೆ ಬಗೆಹರಿಸಿಕೊಳ್ಳುತ್ತಾರೆ ಎಂದು ಈಗಾಗಲೇ ಹೇಳಲಾಗದು. ಈ ಸಂದರ್ಭದಲ್ಲಿ ನಾನು ಹೇಳಬೇಕಾದ್ದು ಇಷ್ಟು: ಸಂಶೋಧನೆಯ ಸಂದರ್ಭದಲ್ಲಿ ನಾನು ಕಂಡ ಸತ್ಯವನ್ನು ಅಷ್ಟೇ ಪ್ರಾಮಾಣಿಕವಾಗಿ ಮಂಡಿಸುವಾಗ, ಯಾರ ಭಾವನೆಗಳಿಗಾದರೂ ನೋವಾಗಿದ್ದರೆ ಅವರು ಅದನ್ನು ಕ್ಷಮಿಸಬೇಕು. ಯಾರನ್ನೂ ನೋಯಿಸುವುದು ನನ್ನ ಉದ್ದೇಶ ಅಲ್ಲ. ಕಾಣುವ ಸಮಾಜಕ್ಕಿಂತ ನಾವು ಇದುವರೆಗೆ ಕಾಣದೆ ಇರುವ ಸಮಾಜವು ಎಷ್ಟು ನಿಗೂಢವೂ, ಆಶ್ಚರ್ಯಕರವೂ ಆಗಿದೆ ಎಂಬುದನ್ನು ನಾವೀಗ ಜಗತ್ತಿಗೆ ಪ್ರಸ್ತುತ ಪಡಿಸಬೇಕಾಗಿದೆ. ಪರೋಕ್ಷವಾಗಿ ಇದು ಸ್ವಾಭಿಮಾನವನ್ನು ಹೆಚ್ಚಿಸಿಕೊಳ್ಳುವ ಕ್ರಿಯೆ ಎಂದು ಭಾವಿಸಬೇಕು. ಕೊರಗರು, ಮ್ಯಾಲರರು, ಜೋಗಿಗಳು, ಗೌಡರು, ಬಂಟರು, ಹೀಗೆ ಅನೇಕ ಜನಾಂಗಗಳ ಉಲ್ಲೇಖ ಇಲ್ಲಿನ ಲೇಖನಗಳಲ್ಲಿ ಬರುತ್ತವೆ. ಅವರೆಲ್ಲರೂ ಇಲ್ಲಿನ ಲೇಖನಗಳನ್ನು ಅತ್ಯಂತ ಮುಕ್ತವಾಗಿ ಸ್ವೀಕರಿಸಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ವಿವರಣೆಗಳಲ್ಲಿ, ವ್ಯಾಖ್ಯಾನಗಳಲ್ಲಿ ತಪ್ಪುಗಳಿದ್ದರೆ ಅದನ್ನು ಪುನರ್ವಿಮರ್ಶಿಸಿಕೊಳ್ಳಲು ನಾನಾ ಸದಾ ಸಿದ್ಧನಿದ್ದೇನೆ.

## 2

ಇಲ್ಲಿಯ ಲೇಖನಗಳಿಗೆ ನಾನು ನಡೆಸಿದ ಕ್ಷೇತ್ರಕಾರ್ಯ ಮತ್ತು ವಿಶ್ಲೇಷಣ ವಿಧಾನಕ್ಕೆ ಸಂಬಂಧಿಸಿದಂತೆ ಎರಡು ಮಾತುಗಳನ್ನು ಹೇಳಬೇಕು. ಜಾನಪದ ಅಧ್ಯಯನ ವಿಧಾನದಲ್ಲಿ ಪ್ರದರ್ಶಕ ಸಿದ್ಧಾಂತ [Performance theory] ಬಹಳ ಈಚಿನದಾದರೂ, ನಾನು ಇಲ್ಲಿನ ಬಹುತೇಕ ಲೇಖನಗಳಿಗೆ ಸಂದರ್ಭ ಸಿದ್ಧಾಂತವನ್ನೇ ನೆಮ್ಮಿಕೊಂಡಿದ್ದೇನೆ. ಇದನ್ನು ಪ್ರಯೋಜನಮೂಲ ವಿವೇಕ ಎಂದು ಬೇಕಾದರೂ ಕರೆಯ